ತುಸು ದೂರದಲ್ಲಿ ಇದ್ದನಂತೆ. ಆತನ ಹೇಳಿಕೆ ಪ್ರಕಾರ, ಸುಬ್ಬಯ್ಯನೊಂದಿಗೆ ಇಬ್ಬರು ಯುವಕರನ್ನು ಆತ ಕಂಡನಂತೆ. ಅವರನ್ನಾತ ತಂದೆ ಮಕ್ಕಳೆಂದು ಭಾವಿಸಿದನಂತೆ. ಅವರೇನೋ ಗಾಢವಾಗಿ ಚರ್ಚಿಸುತ್ತಿದ್ದರಂತೆ. ಏಕಾಏಕಿ ಸುಬ್ಬಯ್ಯ ಒಬ್ಬ ಯುವಕನನ್ನು ತಳ್ಳಿದನಂತೆ. ಯುವಕರು ಸುಮ್ಮನಿದ್ದರೂ, ಸುಬ್ಬಯ್ಯನೇ ಮತ್ತೊಬ್ಬನ ಮೇಲೆ ಕೈಮಾಡಿದನಂತೆ. ಆಗ ಯುವಕರೂ ಮುದುಕನ ಮೇಲೆ ಏರಿ ಹೋದರಂತೆ. ತಂದೆ, ಮಕ್ಕಳ ಜಗಳದ ಉಸಾಬರಿ ತನಗೇಕೆಂದು ಆತ ತಕ್ಷಣ ಜಾಗ ಖಾಲಿ ಮಾಡಿದನಂತೆ. ಪಾರ್ಕಿನಲ್ಲಿ ಬೇರೆ ಯಾರೂ ಇರಲಿಲ್ಲವಂತೆ. ಆ ಯುವಕರಲ್ಲಿ ಒಬ್ಬನ ತಲೆ ಬೋಳು. ಪೂವಯ್ಯನ ಒಬ್ಬನ ಮಗನ ತಲೆಯೂ ಬೋಳು. ಹಾಗಾಗಿ ಹಲ್ಲೆ ಮಾಡಿದವರು ಪೂವಯ್ಯನ ಮಕ್ಕಳೇ ಇರಬೇಕು."

"ಒಳ್ಳೆಯ ಕೆಲಸ, ಬಿದ್ದಪ್ಪ. ಆದರೆ ಒಂದೆರಡು ಸಣ್ಣ ಗೊಂದಲಗಳು. ಹಲ್ಲೆಗೆ ಬಂದವರು ಸುಬ್ಬಯ್ಯನೊಂದಿಗೆ ಹರಟೆ ಹೊಡೆಯುತ್ತಿದ್ದುದೇಕೆ? ಸುಬ್ಬಯ್ಯನೇ ಮೊದಲು ಕೈ ಮಾಡಿದ್ದೇಕೆ? ಆದರೆ ಕೊನೆಗೆ ಏನೂ ಕದಿಯದೇ ಓಡಿದ್ದೇಕೆ?"

"ಅದು ಬಹಳ ಸರಳ. ಪೂವಯ್ಯನ ಮನೆ ಸಮೀಪದ ಗೂಡಂಗಡಿಯವನು ಒಂದು ಕುತೂಹಲಕಾರಿ ಸಂಗತಿ ತಿಳಿಸಿದ. ಸ್ವಲ್ಪ ಸಮಯದ ಹಿಂದೆ ಪೂವಯ್ಯನು ಆತನಲ್ಲಿ ಮರದ ಆಚಾರಿಯೊಬ್ಬನ ಅಗತ್ಯವಿದೆ, ತನ್ನ ವಾಕಿಂಗ್ ಸ್ಟಿಕ್ಕಿನಲ್ಲಿ ಕೆಲವು ಚಿತ್ರಗಳನ್ನು ಕೊರೆಯುವುದಿದೆ ಅಂದನಂತೆ. ಏನಂತ ವಿಚಾರಿಸಿದ್ದಕ್ಕೆ, ತನ್ನ ಮಿತ್ರ ಸುಬ್ಬಯ್ಯ ಆ ಚಿತ್ರಗಳನ್ನು ಕೊರೆದರೆ, ಒಳ್ಳೆಯದಾಗುತ್ತೆ, ಶತ್ರು ನಿವಾರಣೆ ಅಂತೆಲ್ಲಾ ಹೇಳಿದ್ದಾನೆ ಅಂದನಂತೆ. ಗೂಡಂಗಡಿಯವನು ತನ್ನ ಪರಿಚಯದವನೊಬ್ಬನನ್ನು ಕಳಿಸಿದ್ದನಂತೆ. ಈ ವಿಷ್ಯ ಚೆಂದಕ್ಕಿಗೆ ಗೊತ್ತಾಗಿ, ಆತ ಮಕ್ಕಳಿಗೆ ಹೇಳಿರಬೇಕು. ಅವರಿಗೆ ತಂದೆ ಮಾಟ ಮಾಡಿಸಿದ್ದಾರೆಯೇ ಎಂಬ ಅನುಮಾನ ಬಂದಿರಬೇಕು. ಅದಕ್ಕೇ ಅವರು ಮೊದಲಿಗೆ ಸುಬ್ಬಯ್ಯನೊಡನೆ ಸಭ್ಯರಂತೆ ಮಾತಿಗಿಳಿದಿದ್ದಾರೆ. ಪ್ರಾಯಶಃ ಆತನಲ್ಲಿ ಆ ಚಿತ್ರಗಳ ಬಗ್ಗೆ ವಿಚಾರಿಸಿರಬೇಕು. ಆಮೇಲೆ ಹಣ ಕೊಡಲು ಹೇಳಿರಬೇಕು. ಆಗ ಸುಬ್ಬಯ್ಯ ಅವರಿಗೆ ಹೊಡೆದಿದ್ದಾನೆ. ಅವರು ವಾಕಿಂಗ್ ಸ್ಟಿಕ್ಕಿನಿಂದ ಪ್ರತ್ಯಾಕ್ರಮಣ ಮಾಡಿದ್ದಾರೆ. ಇವರ ಗಲಾಟೆಯನ್ನು ದೂರದಲ್ಲಿ ಗಮನಿಸುತ್ತಿದ್ದ ತಿಮ್ಮಯ್ಯ ಹೊರಡಲು ಎದ್ದು ನಿಂತಿದ್ದಾನೆ. ಸುಬ್ಬಯ್ಯನ ನೆರವಿಗಾತ ಬರುತ್ತಾನೆಂದು ಭಾವಿಸಿದ, ಅವರಿಬ್ಬರೂ ತಕ್ಷಣ ಕಾಲು ಕಿತ್ತಿದ್ದಾರೆ. ಗಡಿಬಿಡಿಯಲ್ಲಿ ವಾಕಿಂಗ್ ಸ್ಟಿಕ್ ಬಿಟ್ಟಿದ್ದಾರೆ. ಅವರಿಗೆ ಏನನ್ನೂ ಕದಿಯಲು ಆಗಿಲ್ಲ."

"ಹಾಗಿದ್ರೆ ತಿಮ್ಮಯ್ಯ ಹೊರಟಾಗಲೇ ಅವರೂ ಹೋಗಿದ್ದರೆ, ಅದನ್ನು ತಿಮ್ಮಯ್ಯ ಗಮನಿಸಿರಬೇಕಿತ್ತಲ್ಲ? ಅವನೇಕೆ ಬಂದು ಸುಬ್ಬಯ್ಯನನ್ನು ಮಾತನಾಡಿಸಲಿಲ್ಲ?"

"ನಾನೂ ಇದೇ ಪ್ರಶ್ನೆ ತಿಮ್ಮಯ್ಯನಲ್ಲಿ ಕೇಳ್ದೆ. ತಿಮ್ಮಯ್ಯ ಎದ್ದು ನಿಂತಾಗ, ಅವರಿಬ್ಬರೂ ಈತನತ್ತ ನೋಡಿದರಂತೆ. ತಿಮ್ಮಯ್ಯನಿಗೆ ಗಾಬರಿಯಾಯ್ತು. ಯಾಕೆಂದ್ರೆ ಅವ್ನ ಕಿಸೆಲಿ ಎಟಿಎಂನಿಂದ ಆಗಷ್ಟೇ ತೆಗೆದಿದ್ದ ನಲವತ್ತು ಸಾವಿರ ರೂಪಾಯಿ ಇತ್ತಂತೆ. ಅವ್ರು ಕಳ್ಳರಾಗಿದ್ದರೆ ತನ್ನ ಹಣವನ್ನು ಕದಿಯಬಹುದು ಅಂತ ಅವಸರದಲ್ಲಿ ಜಾಗ ಖಾಲಿ ಮಾಡ್ದನಂತೆ. ಹಾಗಾಗಿ ತಾನು ಗಮನಿಸಲಿಲ್ಲವೆಂದ."

"ಈ ಪೂವಯ್ಯನ ಬಗ್ಗೆ ಏನಾದ್ರೂ ತಿಳಿತಾ?"

"ಆತ ಇನ್ನೂ ನಾಪತ್ತೆ. ಚೆಂದಕ್ಕಿ ಪೊಲೀಸಿಗೆ ದೂರು ಯಾಕೆ ಕೊಟ್ಟಿಲ್ಲ?"

"ಅವ್ನು ನಮ್ಮನ್ನು ಪೊಲೀಸು ಅಂತ ತಿಳ್ಕೊಂಡಿದ್ದಾನಲ್ವೇ! ನನಗೀಗ ತುರ್ತಾಗಿ ಆ ಪಾರ್ಕನ್ನ ನೋಡ್ಬೇಕು."

ಕರಮಚಂದ ಆತುರದಿಂದ ತೆರಳಿದ.

